ಒಂದೇ ತರಹ ಅಂತರ್ಜಲದ ಬಗ್ಗೆ ಒಂದು ನಿಯಮವನ್ನು ತೆಗೆದುಕೊಳ್ಳಬೇಕೆಂದು ಬಂದಿದೆ. ಲಭ್ಯವಿರುವ ಅಂತರ್ಜಲ ಸಂಪನ್ಮೂಲವನ್ನು ಪ್ರಮಾಣಿಕವಾಗಿ ಬಳಸುವಂತೆ ನೋಡಿಕೊಳ್ಳುವುದಕ್ಕೆ ಸರ್ಕಾರವು ಸಣ್ಣ ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ಅವಶ್ಯಕವಾದ ಕ್ರಮಗಳನ್ನು ಕೈಗೊಳ್ಳಲಾಗುವುದು. ಮುಂದೆ ಕೇಂದ್ರೀಯ ಭೂಜಲ ಮಂಡಲಿಯು ಕೋಲಾರ ಜಿಲ್ಲೆಯಲ್ಲಿ ಎರಡು ತಾಲ್ಲೂಕ್‌ಗಳು ಅಂದರೆ ಗೌರಿಬಿದನೂರು ಮತ್ತು ಮುಳಬಾಗಿಲಿನಲ್ಲಿ ಅಂತರ್ಜಲ ಕೃತಕ ಮರು ಪೂರೈಕೆ ಅಧ್ಯಯನವನ್ನು ತೆಗೆದುಕೊಳ್ಳಲು ಉದ್ದೇಶಿಸಿದ್ದು ಈಗಾಗಲೇ ವಿವಿಧ ಕೃತಕ ಮರು ಪೂರೈಕೆಯ ವಿಧಾನಗಳ ಅನುಷ್ಠಾನದ ಬಗ್ಗೆ ಪೂರ್ವಭಾವಿ ಸಮೀಕ್ಷೆಯನ್ನು ಗೌರಿಬಿದನೂರು ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗಿದೆ. ಮಳೆ ಬಂದಂತಹ ನೀರನ್ನು ಎತ್ತರವಾದ ಸ್ಥಳದಲ್ಲಿ ಶೇಖರಿಸಿಟ್ಟು ಆ ನೀರು ನೆಲದೊಳಗೆ ಹೋಗಿ ಕೆಳಭಾಗದಲ್ಲಿರತಕ್ಕಂಥ ಜನರಿಗೆ ಆ ನೀರನ್ನು ಉಪಯೋಗಿಸತಕ್ಕಂಥ ಪ್ರಯೋಜನವಾಗುತ್ತದೆ. ಈ ರೀತಿಯಾದ ಯೋಜನೆಯನ್ನು ಸರ್ಕಾರ ಹಾಕಿಕೊಳ್ಳುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ:- ಅಧ್ಯಕ್ಷರೇ, ಕೃತಕ ಮರುಪೂರೈಕೆಗೆ ಅಂದರೆ ರೀ ಚಾರ್ಜಿಂಗ್ ಆಫ್ ವಾಟರ್ ಕೇಂದ್ರ ಸರ್ಕಾರದವರು ಒಂದು ಮಾಡಲ್ ಅನ್ನು ಎಲ್ಲಾ ಸರ್ಕಾರಕ್ಕೂ ಕಳುಹಿಸಿ ಕೊಟ್ಟಿದ್ದಾರೆ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಕೆಳಮಟ್ಟಕ್ಕೆ ಹೋಗಿರುವುದಕ್ಕೆ ಕಾರಣವೇನೆಂದರೆ 300-400-500 ಅಡಿಗಳ ಕೆಳಗಡೆ ಹೋಗಿದೆ. ಎರಡನೆಯದು ಬೋರ್‌ವೆಲ್ ತೆಗೆಸುವವರು ಹಣ ಹೆಚ್ಚಾಗಿರುವವರು 400-500 ಅಡಿಗೆ ಹೋಗುತ್ತಾರೆ. ಬಡವರು ಪಾಪ 200-250 ಅಡಿಗಳಿಗೆ ಹೋಗುತ್ತಾರೆ. ಜೊತೆಗೆ ಅಕ್ಕಪಕ್ಕದಲ್ಲಿಯೇ ಹಾಕಿರುತ್ತಾರೆ ಅಂತಹ ಸಮಯದಲ್ಲಿ ಏನು ಮಾಡುವುದಕ್ಕಾಗುವುದಿಲ್ಲ. ಮಹಾರಾಷ್ಟ್ರದಲ್ಲಿ ಒಂದು ಆಕ್ಟ್ ಇದೆ. ಕನಿಷ್ಠ 1000 ಅಡಿ ಅಥವಾ 500 ಅಡಿ ದೂರ ದೂರ ಇರಬೇಕೆಂದು ಇದೆ.

ಶ್ರೀ ಡಿ.ಎ. ಚಿನ್ನಪ್ಪ:- ಕನಿಷ್ಠ 225 ಅಡಿ ಆಮೇಲೆ 600 ಅಡಿ ಒಂದು ಕೊಳವೆ ಬಾವಿಗೂ ಇನ್ನೊಂದು ಕೊಳವೆ ಬಾವಿಗೂ ಇರಬೇಕು. ತೆರೆದ ಬಾವಿಗಳಲ್ಲಿ ಆರು ಅಡಿ ಡಿಸ್ಟೆನ್ಸ್ ಇರಬೇಕು.

SRI M.V. VENKATAPPA:- Too much exploitation of underground water ಒಂದು ಕಂಟ್ರೋಲ್ ಜಿಲ್ ಅಂತ ಹೇಳಿ ಕೇಂದ್ರ ಸರ್ಕಾರದವರು ಕಳುಹಿಸಿಕೊಟ್ಟಿದ್ದಾರೆ. ಆ ಬಿಲ್ಲನ್ನು ತಂದರೆ ಅನೇಕ ರೈತರಿಗೆ ಅನುಕೂಲವಾಗುತ್ತದೆ. ಆ ಬಿಲ್ಲನ್ನು ಯಾವಾಗ ತರುತ್ತೀರಿ ?

ಶ್ರೀ ಡಿ.ಎ. ಚಿನ್ನಪ್ಪ:- ಆದಷ್ಟು ಬೇಗ ತರುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ರಾಜ್ಯಾದ್ಯಂತ ಅನೇಕ ಪಟ್ಟಣಗಳಲ್ಲಿ ಸ್ಮಶಾನಗಳಿಲ್ಲದೆ ಜನರು ತೊಂದರೆ ಪಡುತ್ತಿರುವುದು

130 (761): ಶ್ರೀ ಅಂಜನಮೂರ್ತಿ (ನೆಲಮಂಗಲ):-

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯಾದ್ಯಂತ ಅನೇಕ ಪಟ್ಟಣಗಳಲ್ಲಿ ಸ್ಮಶಾನಗಳಿಲ್ಲದೆ ಜನರು ತೊಂದರೆ ಪಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಅಂತಹ ಸ್ಥಳಗಳಲ್ಲಿ ಶವಾಗಾರಗಳನ್ನು ತೆರೆಯಲು ಸರ್ಕಾರದವರು ಜರೂರು ಕ್ರಮ ಕೈಗೊಳ್ಳುವರೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಈ ಮೇಲಿನ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ:– ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ರಾಜ್ಯಾದ್ಯಂತ ಅನೇಕ ಪಟ್ಟಣಗಳಲ್ಲಿ ಸ್ಮಶಾನಗಳು ಇಲ್ಲದೆ ಜನರು ತೊಂದರೆ ಪಡುತ್ತಿರುವುದು ನಿಜವೇ ಆನ್ನುವುದಕ್ಕೆ ಅಂತಹ ಪ್ರಕರಣ ಸರ್ಕಾರ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ನಾನಾದರೂ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಇದು ಪ್ರತಿಯೊಬ್ಬರಿಗೂ ಗೊತ್ತಿರುವ ಕಟು ಸತ್ಯ. ಕೆಲವು ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ತಾಲ್ಲೂಕ್ ಮಟ್ಟದಲ್ಲಿ ತಾಲ್ಲೂಕ್ ಕೇಂದ್ರದಲ್ಲಿ ಅವರದೇ ಆದ ಪ್ರತ್ಯೇಕವಾದ ಸ್ಮಶಾನಗಳು ಇಲ್ಲವೆ ರಸ್ತೆಯ ಪಕ್ಕದಲ್ಲಿ ಶವಗಳನ್ನು ಹೂಳುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೋಸ್ಕರ ಕೊನೆಯ ಪಕ್ಷ ನಗರದಲ್ಲಿ ಇರುವ ರೀತಿ ಶವಾಗಾರಗಳನ್ನು ಪಟ್ಟಣದಲ್ಲಿ ನಿರ್ಮಿಸಿದರೆ ಕೆಲವರಿಗೆ ಅನೇಕ ತೊಂದರೆಗಳು ತಪ್ಪುತ್ತದೆ. ಇದೊಂದು ರೀತಿಯ ಆರೋಗ್ಯ ಕಾಪಾಡುವುದಕ್ಕೆ ಉತ್ತಮವಾಗುತ್ತದೆ. ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂದು ಕೇಳಬಯಸುತ್ತೇನೆ.

ಶ್ರೀ ಚೌಡರೆಡ್ಡಿ:– ಕೆ.ಎಂ.ಸಿ., ಎ.ಎಂ. ಆಕ್ಟ್ ಪ್ರಕಾರ ಇದನ್ನು ಲೋಕಲ್ ಬಾಡೀಸ್ ಏನಿವೆ ಅವು ಮೆಂಟೇನ್ ಮಾಡಬೇಕಾಗುತ್ತದೆ. ಈ ಪ್ರಸ್ತಾವನೆ ಯಾವುದೂ ನಮ್ಮ ಸರ್ಕಾರಕ್ಕೆ ಬಂದಿಲ್ಲ, ಬಂದರೆ ಅದನ್ನೂ ಕಾನೂನು ಪ್ರಕಾರ ಪರಿಶೀಲನೆ ಮಾಡುತ್ತೇನೆ.

ಶ್ರೀ ಅಂಜನಮೂರ್ತಿ:– ಚಿತಾಗಾರಗಳನ್ನು ಪಟ್ಟಣ ಪ್ರದೇಶದಲ್ಲಿ ಸೃಷ್ಟಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಚೌಡರೆಡ್ಡಿ:– ಇದನ್ನು ಪರಿಶೀಲನೆ ಮಾಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಸ್ಟೆಲ್‌ಗಳಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ

341 (1881): ಶ್ರೀ ಕೆ. ಕುಶಾಲ್ (ಸುಳ್ಯ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಆಶ್ರಮ ಶಾಲೆ ಹಾಗೂ ಮೆಟ್ರಿಕ್ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ – ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಆ) ಸದರಿ ಸಿಬ್ಬಂದಿಗಳ ಪೈಕಿ ಹುದ್ದೆಗಳನ್ನು ಭರ್ತಿ ಮಾಡಿರುವ ಸಂಖ್ಯೆ ಎಷ್ಟು ?

ಇ) ಸದರಿ ಸಿಬ್ಬಂದಿಗಳ ಪೈಕಿ ಹುದ್ದೆಗಳನ್ನು ಭರ್ತಿ ಮಾಡಲು ಬಾಕಿ ಇರುವ ಸಂಖ್ಯೆ ಎಷ್ಟು ?

ಈ) ಸದರಿ ಸಿಬ್ಬಂದಿಗಳ ಪೈಕಿ ಈ ಹುದ್ದೆಗಳನ್ನು ಭರ್ತಿ ಮಾಡದೆ ಎಷ್ಟು ವರ್ಷಗಳಾದವು ?

ಉ) ಈ ಬಾಕಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) 265 ಹುದ್ದೆಗಳು.

ಆ) 228 ಹುದ್ದೆಗಳು.